**ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಮೊಳಕಾಲ್ಮೂರು .**

**ಸಿ.ಸಿ. ನಂ. 213/2026**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ನಲ್ಲಜರುವಯ್ಯ | ಸಿ.ಡಬ್ಲ್ಯೂ – 1 |
| ತಂದೆ/ ಗಂಡನ ಹೆಸರು | : | ಬೋರಯ್ಯ | ಪಿ.ಡಬ್ಲ್ಯೂ – 1 |
| ವಯಸ್ಸು | : | 32 ವರ್ಷ | |
| ಉದ್ಯೋಗ | : | ಕಿರಾಣಿ ವ್ಯಾಪಾರ | |
| ವಾಸಸ್ಥಳ | : | ಗಜ್ಜಿಗೇನಹಳ್ಳಿ | ದಿಃ 26.05.2026 |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ನಾನು ಆರೋಪಿಯನ್ನು ನೋಡಿದ್ದೇನೆ.

ದಿ: 10.01.2026 ರಂದು ಮಧ್ಯ ರಾತ್ರಿ 2.15 ರ ಸಮಯದಲ್ಲಿ ಬಳ್ಳಾರಿ ಬೆಂಗಳೂರು ಮುಖ್ಯ ರಸ್ತೆಯಲ್ಲಿ ನನಗೆ ಸೇರಿದ ತಗಡಿನ ಡಬ್ಬದ ಅಂಗಡಿಯಲ್ಲಿ 2 ಬೀಗಗಳನ್ನು ಮುರಿದು ಆರೋಪಿತರು ಕಳ್ಳತನ ಮಾಡಿರುತ್ತಾನೆ. ವಿಮಲ್ ಪ್ಯಾಕೆಟ್ ತುಂಬಿದ ಒಂದು ಬ್ಯಾಗ್, ಸ್ಟಾರ್ ಪ್ಯಾಕೆಟ್ ತುಂಬಿದ ಒಂದು ಬ್ಯಾಗ್ ಹಾಗೂ 5000 ನಗದನ್ನು ಕಳ್ಳತನ ಮಾಡಿರುತ್ತಾರೆ.ನಂತರ ನಮ್ಮ ಪಕ್ಕದ ಹೊಟೆಲ್ ನವರು ಬೆಳಿಗ್ಗೆ 5.00 ರಿಂದ 5.30 ರ ಸಮಯದಲ್ಲಿ ನನಗೆ ದೂರವಾಣಿ ಕರೆ ಮಾಡಿ ವಿಚಾರ ತಿಳಿಸಿದ್ದು, ನಾನು ಅಂಗಡಿಗೆ ಬಂದು ನೋಡಲಾಗಿ ಕಳ್ಳತನ ಆಗಿರುವುದು ಕಂಡು ಬಂದಿರುತ್ತದೆ. ನಂತರ ನಾನು ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ.

ದಿ: 11.01.2026 ರಂದು ಪೊಲೀಸರು ನನ್ನ ಅಂಗಡಿಯ ಬಳಿ ಕೃತ್ಯ ನಡೆದ ಸ್ಥಳದಲ್ಲಿ ಚಾಸಾ 2 ಮತ್ತು 3 ರವರ ಸಮಕ್ಷಮ ನಾನು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 9.15 ರಿಂದ 10.15 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ. ನಮ್ಮ ಪಕ್ಕದ ಹೋಟೆಲ್ ನವರಾದ ಚಾಸಾ 7 ಮತ್ತು 8 ರವರ ಅಗಂಡಿಗಳಲ್ಲಿಯೂ ಕಳ್ಳತನವಾಗಿದ್ದು, ಸದರಿ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿರುತ್ತಾರೆ.

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದೂರನ್ನು ನಿಪಿ 1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 3 ಸ್ಥಳ ಮಹಜರ್ ಗಳನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸದರಿ ಮಹಜರ್ ಗಳನ್ನು ಕ್ರಮವಾಗಿ ನಿಪಿ 2 ರಿಂದ 4 ಎಂದು ಮತ್ತು

ಸಾಕ್ಷಿಯ ಸಹಿಗಳನ್ನು ನಿಪಿ 2(ಎ), 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ 6 ಭಾವಚಿತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ 5 ರಿಂದ 10 ಎಂದು ಗುರುತಿಸಲಾಯಿತು. ಸದರಿ ಭಾವಚಿತ್ರಗಳನ್ನು ನನ್ನ ಹಾಗೂ ಚಾಸಾ 6 ಮತ್ತು 7 ರವರ ಅಂಗಡಿಯಲ್ಲಿ ಮಹಜರ್ ಕ್ರಮ ಜರುಗಿಸಿದಾಗ ತೆಗೆಯಲಾಗಿರುತ್ತದೆ. ಮಹಜರ್ ಸಮಯದಲ್ಲಿ ನನ್ನ ಹಾಗೂ ಚಾಸಾ 6 ಮತ್ತು 7 ರವರ ಅಂಗಡಿಗಳಿಗೆ ಹಾಕಿದ್ದ ತಲಾ 2 ಬೀಗಗಳನ್ನು ಒಟ್ಟು 5 ಬೀಗಳನ್ನು ಪೊಲೀಸರು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಳದಿ ಡಬ್ಬದಲ್ಲಿರುವ 2 ಬೀಗಗಳನ್ನು ನೋಡಿ ಸದರಿ ಬೀಗಗಳನ್ನು ನಮ್ಮ ಅಂಗಡಿಯಿಂದ ಮಹಜರ್ ಸಮಯದಲ್ಲಿ ಜಪ್ತು ಪಡಿಸಿಕೊಂಡ ಬೀಗಗಳು ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಬೀಗಗಳನ್ನು ಕ್ರಮವಾಗಿ ಮು.ಮಾ. 1 ಮತ್ತು 2 ಎಂದು, ಸಾಕ್ಷಿಯು ಬಿಳಿ ಡಬ್ಬದಲ್ಲಿರುವ 2 ಬೀಗಗಳನ್ನು ನೋಡಿ ಸದರಿ ಬೀಗಗಳನ್ನು ಚಾಸಾ 6 ರವರ ಅಂಗಡಿಯಿಂದ ಮಹಜರ್ ಸಮಯಲ್ಲಿ ಜಪ್ತು ಪಡಿಸಿಕೊಂಡ ಬೀಗಗಳು ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಬೀಗಗಳನ್ನು ಕ್ರಮವಾಗಿ ಮು.ಮಾ. 3 ಮತ್ತು 4 ಎಂದು, ಸಾಕ್ಷಿಯು ನೀಲಿ ಡಬ್ಬದಲ್ಲಿರುವ 1 ಬೀಗವನ್ನು ನೋಡಿ ಸದರಿ ಬೀಗವನ್ನು ಚಾಸಾ 7 ರವರ ಅಂಗಡಿಯಿಂದ ಮಹಜರ್ ಸಮಯದಲ್ಲಿ ಜಪ್ತು ಪಡಿಸಿಕೊಂಡ ಬೀಗಗಳು ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಬೀಗವನ್ನು ಮು.ಮಾ.5 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಕಬ್ಬಿಣದ ಹಾರೆಯನ್ನು ನೋಡಿ ಚಾಸಾ 7 ರವರ ಅಂಗಡಿಯ ಹತ್ತಿರ ಜಪ್ತು ಪಡಿಸಿಕೊಂಡ ವಸ್ತು ಎಂದು ಗುರುತಿಸಿದ ಮೇರೆಗೆ ಸದರಿ ಕಬ್ಬಿಣದ ಹಾರೆಯನ್ನು ಮು.ಮಾ. 6 ಎಂದು ಗುರುತಿಸಲಾಯಿತು.

ಆರೋಪಿಯು ನಮ್ಮ ಅಂಗಡಿಯಲ್ಲಿ ಕಳ್ಳತನ ಮಾಡಿದ್ದ ಒಂದು ಬ್ಯಾಗಿನಲ್ಲಿದ್ದ ವಿಮಲ್ ಪ್ಯಾಕೇಟ್ ನ್ನು ಹಿರಿಯೂರಿನ ಒಂದು ಅಂಗಡಿಯವರಿಗೆ ನೀಡಿದ್ದು, ಇನ್ನೊಂದು ಬ್ಯಾಗಿನಲ್ಲಿದ್ದ ಪ್ಯಾಕೇಟ್ ನ್ನು ಚಳ್ಳಕೆರೆಯಲ್ಲಿ ಮಾರಾಟ ಮಾಡುವಾಗ ಪೊಲೀಸರು ಆತನನ್ನು ಹಿಡಿದು ವಿಚಾರಣೆ ಮಾಡಿರುತ್ತಾರೆ. ನಂತರ ಪೊಲೀಸರು ಮಹಜರ್ ಕ್ರಮ ಜರುಗಿಸಲು ಆರೋಪಿಯನ್ನು ನಮ್ಮ ಅಂಗಡಿಯಲ್ಲಿ ಬಳಿ ಕರೆದುಕೊಂಡು ಬಂದಿದ್ದರು. ಆ ಸಮಯದಲ್ಲಿ ಚಾಸಾ–2 ಮತ್ತು 3 ರವರು ಹಾಜರಿದ್ದರು. ಪೊಲೀಸರು ಆರೋಪಿಯನ್ನು ತೋರಿಸಿದ್ದು ನಾವು ಈತನು ಕಳ್ಳತನ ಮಾಡಿರುತ್ತಾನೆ ಎಂದು ಹೇಳಿರುತ್ತೇವೆ. ಈ ಬಗ್ಗೆ ನಾನು ಪೊಲಿಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ

ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು).**

**ಪಾಟೀ ಸವಾಲು: ಮಾನ್ಯ ಎ.ಪಿ.ಪಿ. ಅವರಿಂದ**

ದಿ: 10.01.2023 ರಂದು ಚಾಸಾ 6 ಮತ್ತು 7 ರವರ ಅಂಗಡಿಯಲ್ಲಿ ಕಳ್ಳತನ ಮಾಡಿದ್ದು, ಚಾಸಾ 8 ರವರ ಅಂಗಡಿಯಲ್ಲಿ ಬೀಗ ಮುರಿದು ಆರೋಪಿಯು ಕಳ್ಳತನ ಮಾಡಲು ಪ್ರಯತ್ನ ಮಾಡಿರುತ್ತಾರೆ ಎಂದರೆ ಸರಿ. ಆರೋಪಿಯು ಕಳ್ಳತನಕ್ಕೆ ಉಪಯೋಗಿಸಿದ ಹಾರೆಯನ್ನು ಶಿವಸಂಕಲ್ಪ ಎಲೆಕ್ಟ್ರಿಕಲ್ ಶಾಪ್ ನ ಪಕ್ಕದಲ್ಲಿ ಬಿಸಾಕಿ ಹೋಗಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿಯು ಕಳ್ಳತನ ಮಾಡಿದ್ದು ಗುಟ್ಕಾ ಪ್ಯಾಕೆಟಗಳಿದ್ದ 2 ಬ್ಯಾಗ್ ಗಳನ್ನು ಚಳ್ಳಕೆರೆ ಎ.ಪಿ.ಎಂ.ಸಿ. ಮಾರ್ಕೆಟ್ ನ ಬಳಿ ಹೋಗಿ ಯಾರಿಗೂ ಕಾಣದ ಹಾಗೆ ತಾನು ಉಳಿದುಕೊಂಡ ಜಾಗದಲ್ಲಿ ಬಚ್ಚಿಟ್ಟಿದ್ದ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ಸದರಿ ಬ್ಯಾಗಿನಲ್ಲಿ ಒಂದು ಬ್ಯಾಗ್ ನ್ನು ಚಾಸಾ 13 ರವರಿಗೆ ಹಿರಿಯೂರಿನಲ್ಲಿ ರೂ. 4000/- ಗಳಿಗೆ ಮಾರಾಟ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ ಎಂದರೆ ಸರಿ. ನಾನು ನನ್ನ ಹಾಗೂ ಚಾಸಾ 6 ಮತ್ತು 7 ರವರ ಅಂಗಡಿಯಲ್ಲಿ ಮಹಜರ್ ಕ್ರಮ ಜರುಗಿಸಿದಾಗ ಹಾಜರಿದ್ದೆ ಎಂದರೆ ಸರಿ. ಚಾಸಾ 6 ರವರ ಅಂಗಡಿಯಲ್ಲಿ ಬೆಳಿಗ್ಗೆ 10.30 ರಿಂದ 11.30 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಚಾಸಾ 7 ರವರ ಅಂಗಡಿಯಲ್ಲಿ ಬೆಳಿಗ್ಗೆ 11.45 ರಿಂದ 12.45 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಎಲ್.ಎ.ಡಿ.ಸಿ. ಆರೋಪಿ ಪರ ವಕೀಲರಿಂದ .**

ನಾನು ಡಿಗ್ರಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಸ್ನೇಹಜೀವಿ ಫ್ರಾಮಿಜನ್ ಸ್ಟೋರ್ ನಡೆಸಲು ಸಂಬಂಧ ಪಟ್ಟ ಅದಿಕಾರಿಗಳಿಂದ ಪರವಾನಿಗೆ ಪಡೆದಿರುತ್ತೇನೆ. ಪಂಚಾಯಿತಿಯಿಂದ ಪರವಾನಿಗೆ ಪಡೆದಿರುತ್ತೇನೆ. ನಾನು 3 ವರ್ಷಗಳಿಂದ ಪರವಾನಗಿ ಹೊಂದಿರುತ್ತೇನೆ. ನನ್ನ ಅಂಗಡಿಗೆ ಸಂಬಂಧಿಸಿದಂತೆ ಪ್ರತಿ ವರ್ಷ ಕಂದಾಯವನ್ನು ಪಾವತಿಸುತ್ತಿದ್ದೇನೆ, ಸದರಿ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಪ್ರತಿ ದಿನ ನಮ್ಮ ಅಂಗಡಿಯಲ್ಲಿ 10 ರಿಂದ 15 ಸಾವಿರ ವ್ಯವಹಾರ ನಡೆಯುತ್ತದೆ. ಸದರಿ ಹಣವನ್ನು ನಾನು ಅಂಗಡಿಯಲ್ಲಿಯೇ ಇಟ್ಟು ಹೋಗುತ್ತಿದ್ದೆ. ದಿ:

09.01.2026 ರಂದು ನಮ್ಮ ಅಂಗಡಿಯಲ್ಲಿ ರೂ. 15000 ವ್ಯಾಪಾರ ಆಗಿತ್ತು. ಸದರಿ ಹಣದಲ್ಲಿ ವಸ್ತುವನ್ನು ಖರೀದಿಸಲು ಹಣವನ್ನು ನೀಡಿದ್ದು, ಉಳಿದ ರೂ. 5000/- ಹಣವನ್ನು ಅಂಗಡಿಯಲ್ಲಿಯೇ ಇಟ್ಟಿದ್ದೇ. ರೂ 500 ಮುಖಬೆಲೆಯ ನೋಟುಗಳನ್ನು ಇಟ್ಟಿದ್ದೆ. ವಿಮಲ್ ಗುಟ್ಕಾ ಹಾಗೂ ಸ್ಟಾರ್ ಗುಟ್ಕಾವನ್ನು ಮಾರಾಟ ಮಾಡಬಾರದು ಎಂದು ಸರ್ಕಾರ ನಿಯಮ ಮಾಡಿರುತ್ತದೆ ಎಂದರೆ ಸರಿ. ಸದರಿ ವಸ್ತುಗಳನ್ನು ಮಾರಾಟ ಮಾಡಲು ನಾನು ಸರ್ಕಾರದಿಂದ ಪರವಾನಿಗೆ ಪಡೆದಿರುವುದಿಲ್ಲ. ನಮ್ಮ ಅಂಗಡಿಯಲ್ಲಿದ್ದ ವಿಮಲ್ ಗುಟ್ಕಾ ಹಾಗೂ ಸಸ್ಟಾರ್ ಗುಟ್ಕಾವನ್ನು ಚಳ್ಳಕೆರೆ ಅಂಗಡಿಯಲ್ಲಿ ಖರೀದಿ ಮಾಡಿದ್ದೆ. ಒಂದು ವಿಮಲ್ ಬ್ಯಾಗಿಗೆ ರೂ. 6300/- ಆಗುತ್ತದೆ. ಒಂದು ಸ್ಟಾರ್ ಗುಟ್ಕಾ ಬ್ಯಾಗಿಗೆ ರೂ. 5700/- ಆಗುತ್ತದೆ. ದಿ: 09.01.2026 ರಂದು 20 ರಿಂದ 30 ವಿಮಲ್ ಮತ್ತು ಸ್ಟಾರ್ ಗುಟ್ಕಾವನ್ನು ಮಾರಾಟ ಮಾಡಿದ್ದೆ. ದಿ: 09.01.2026 ರಂದು ನಮ್ಮ ಅಂಗಡಿಯಲ್ಲಿ 60 ವಿಮಲ್ ಗುಟ್ಕಾ ಹಾಗೂ 60 ಸ್ಟಾರ್ ಗುಟ್ಕಾಗಳು ಇದ್ದವು. ಸದರಿ ದಿನದಂದು ಎಷ್ಟು ವಿಮಲ್ ಗುಟ್ಕಾ ಹಾಗೂ ಸ್ಟಾರ್ ಗುಟ್ಕಾವನ್ನು ಮಾರಾಟ ಮಾಡಿದ್ದೇ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಂಗಡಿಯಲ್ಲಿ 500 ರೂ. ಮುಖಬೆಲೆಯ ಹಣವನ್ನು ಕಳ್ಳತನ ಮಾಡಲಾಗಿತ್ತು. ನಮ್ಮ ಅಂಗಡಿಯ ಇಂಟರ್ ಲಾಕ್ ಬೀಗದ ಕೈಗಳನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಸದರಿ ಬೀಗವನ್ನು ನಾನು ಚಳ್ಳಕೆರೆಯಲ್ಲಿ ಖರಿದಿಸಿರುತ್ತೇನೆ. ಸದರಿ ಬಿಲ್ಲುಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ನಮ್ಮ ಅಂಗಡಿಯಲ್ಲಿ ವಿಮಲ್ ಗುಟ್ಕಾ ಹಾಗೂ ಸ್ಟಾರ್ ಗುಟ್ಕಾವನ್ನು ಹೊರತು ಪಡಿಸಿ ಬೇರೆ ಬೆಲೆಬಾಳುವ ವಸ್ತುಗಳು ಇರಲಿಲ್ಲ. ಸಾಮಾನ್ಯವಾಗಿ ಸಂತೆಯಲ್ಲಿ ವಸ್ತುಗಳನ್ನು ಮಾರಾಟ ಮಾಡಲು ರೈತರು ಹಿಂದಿನ ದಿನವೇ ಮಾರುಕಟ್ಟೆಯಲ್ಲಿ ಮಲಗುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬೇರೆ ವ್ಯಕ್ತಿಗಳು ಮಲಗುತ್ತಾರೆ ಎಂದು ನುಡಿದಿರುತ್ತಾರೆ. ತಳಕು ಗ್ರಾಮದಲ್ಲಿ ಶನಿವಾರದಂದು ಸಂತೆ ನಡೆಯುತ್ತದೆ. ಸಾಮಾನ್ಯವಾಗಿ ಮಧ್ಯರಾತ್ರಿ 1.00 ಗಂಟೆ ಸಮಯದಲ್ಲಿ ನಿಶಬ್ದ ಇರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಅಂಗಡಿಯ ಬೀಗವನ್ನು ಕಲ್ಲಿನಿಂದ ಒಡೆದರೆ ಸುಮಾರು ದೂರದವರೆಗೂ ಕೇಳುತ್ತದೆ ಎಂದರೆ ಸರಿ. ನಿಪಿ 1 ನ್ನು ನಾನೇ ಬರೆದಿರುತ್ತೇನೆ. ಸದರಿ ದೂರನ್ನು ನನ್ನ ಮಾಹಿತಿಯ ಮೇರೆಗೆ ಬರೆಯಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ಠಾಣೆಗೆ 2 ಬಾರಿ ಹೋಗಿದ್ದು, ಒಂದು ಸಹಿಯನ್ನು ಮಾಡಿರುತ್ತೇನೆ. ಸದರಿ ಸಹಿಯನ್ನು ಯಾವ ದಾಖಲೆಗೆ ಮಾಡಿರುತ್ತೇನೆ ಎಂದು ಹೇಳಲು ನೆನಪಿಲ್ಲ. ಕಳ್ಳತನ ನಡೆದಿದೆ ಎನ್ನಲಾದ ದಿನದಂದು ಪೊಲೀಸರು ನಮ್ಮ ಅಂಗಡಿಗೆ ಭೇಟಿ ನೀಡಿದ್ದರು. ಸುಮಾರು 4 ಜನ ಪೊಲೀಸರು ನಮ್ಮ ಹಾಗೂ ಇತರೇ

ಅಂಗಡಿಗಳಲ್ಲಿ ಕಳ್ಳತನವಾದ ಸ್ಥಳಕ್ಕೆ ಭೇಟಿ ನೀಡಿ, ಫೀಂಗರ್ ಪ್ರಿಂಟ್ ಹಾಗೂ ಬೀಗಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ದಿನದಂದು ಮು.ಮಾಲು 1 ರಿಂದ 5 ನ್ನು ಪೊಲೀಸರು ತೆಗೆದುಕೊಂಡು ಹೋಗಿರುತ್ತಾರೆ. ಕಳ್ಳತನ ನಡೆದ ದಿನದಂದು ನಾನು ಬೆಳಿಗ್ಗೆ 5.30 ಗಂಟೆಗೆ ಠಾಣೆಗೆ ಹೋಗಿದ್ದೆ. ಸದರಿ ದಿನದಂದೇ ಅದೇ ಸಮಯದಲ್ಲಿ ಠಾಣೆಗೆ ದೂರನ್ನು ನೀಡಿರುತ್ತೇನೆ. ರಾತ್ರಿ 1.00 ಗಂಟೆ ಸಮಯದಲ್ಲಿ ಬೆಂಗಳೂರಿನಿಂದ ರಾಯದುರ್ಗಕ್ಕೆ ಹೋಗುವ ಬಸ್ಸುಗಳು ತಳಕು ಬಸ್ ನಿಲ್ದಾಣಕ್ಕೆ ಬಂದು ಹೋಗುತ್ತದೆ ಎಂದರೆ ನಾನು ನೋಡಿರುವುದಿಲ್ಲ. ತಳಕು ಬಸ್ ನಿಲ್ದಾಣ ಜನನಿಬಿಡ ಸ್ಥಳವಾಗಿರುತ್ತದೆ ಎಂದರೆ ಸಾಕ್ಷಿಯು ಬೆಳಗ್ಗಿನ ಸಮಯದಲ್ಲಿ ಜನಗಳು ಇದ್ದು, ರಾತ್ರಿ ಸುಮಾರು 8.30 ರ ನಂತರ ಯಾರೂ ಜನರು ಇರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಪ್ರೋವಿಜನ್ ಸ್ಟೋರ್ ತಳಕು ಸರ್ಕಲ್ ನಲ್ಲಿ ಇರುತ್ತದೆ ಎಂದರೆ ಸರಿ. ತಳಕು ಸರ್ಕಲ್ ನಿಂದ 100 ಮೀಟರ್ ಅಂತರದಲ್ಲಿ ಆಸ್ಪತ್ರೆ, ಶಾಲೆ ಮತ್ತು ಪೊಲೀಸ್ ಠಾಣೆ ಇರುತ್ತದೆ ಎಂದರೆ ಸರಿ.

ಕೃತ್ಯ ನಡೆದಿದೆ ಎಂದು ಹೇಳಲಾದ ಸಮಯದಲ್ಲಿ ನಾನು ನನ್ನ ಅಂಗಡಿಗೆ ಸಿ.ಸಿ. ಕ್ಯಾಮೆರಾ ಅಳವಡಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸಿ.ಸಿ. ಕ್ಯಾಮೆರಾವನ್ನು ಕಿತ್ತು ಹಾಕಿರುತ್ತಾರೆ ಎಂದು ನುಡಿದಿರುತ್ತಾರೆ. ನಾನು ಕಲರ್ ಸಿ.ಸಿ. ಕ್ಯಾಮೆರಾವನ್ನು ಅಳವಡಿಸಿದ್ದೆ. ಸದರಿ ಸಿ.ಸಿ. ಕ್ಯಾಮೆರಾವನ್ನು ಪೊಲೀಸರು ಜಪ್ತು ಪಡಿಸಿಕೊಂಡಿದ್ದಾರೆಯೇ ಎಂದರೆ ಸಾಕ್ಷಿಯು ಸದರಿ. ಸಿ.ಸಿ. ಕ್ಯಾಮೆರಾದಲ್ಲಿ ಯಾವುದೇ ಮೆಮೋರಿ ಕಾರ್ಡ್ ಇಲ್ಲದ ಕಾರಣ ಜಪ್ತು ಪಡಿಸಿಕೊಂಡಿಲ್ಲ. ಸದರಿ ಕ್ಯಾಮೇರಾ ನನ್ನ ಹತ್ತಿರ ಇರುತ್ತದೆ ಎಂದು ನುಡಿದಿರುತ್ತಾರೆ. ಚಾಸಾ 6 ಮತ್ತು 7 ರವರ ಅಂಗಡಿಯಲ್ಲಿಯೂ ಸಿ.ಸಿ. ಕ್ಯಾಮೇರಾ ಅಳವಡಿಸಲಾಗಿರುತ್ತದೆ ಎಂದರೆ ಸರಿ. ಚಾಸಾ 6 ಮತ್ತು 7 ರವರ ಅಂಗಡಿಯ ಸಿ.ಸಿ. ಕ್ಯಾಮೆರಾ ದೃಶ್ಯಾವಳಿಗಳನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಸದರಿ ದೃಶ್ಯಾವಳಿಗಳಲ್ಲಿ ಯಾರ ಅಂಗಡಿಯಲ್ಲಿ ಕಳ್ಳತನವಾಗಿರುತ್ತದೆ ಎಂದು ಕಂಡು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಸಿ.ಸಿ. ಟಿ.ವಿ. ದೃಶ್ಯಾವಳಿಯಲ್ಲಿ ಆರೋಪಿಯ ಮುಖವನ್ನು ನೋಡಿದ್ದೀರಿಯೇ ಎಂದರೆ ಸಾಕ್ಷಿಯು ಸ್ಪಷ್ಟವಾಗಿ ಕಾಣಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಿ.ಸಿ. ಟಿ.ವಿ.ಯಲ್ಲಿ ಕಂಡ ವ್ಯಕ್ತಿಯೇ ಬೇರೆ ಆರೋಪಿಯೇ ಬೇರೆ ಎಂದರೆ ಸಾಕ್ಷಿಯು ಸಿ.ಸಿ. ಟಿ.ವಿ.ಯಲ್ಲಿ ಸರಿಯಾಗಿ ಮುಖ ಕಾಣಿಸುತ್ತಿರಲಿಲ್ಲ ಎಂದು ನುಡಿದಿರುತ್ತಾರೆ. ಚಾಸಾ 6 ಮತ್ತು 7 ರವರ ಅಂಗಡಿಯ ಸಿ.ಸಿ. ಟಿ.ವಿ. ದೃಶ್ಯಾವಳಿಯಲ್ಲಿ ದಿನಾಂಕವು ಕಂಡು ಬಂದಿರುತ್ತದೆ. ನಾನು ನೋಡಿದ ದೃಶ್ಯಾವಳಿಯು ದಿ: 10.01.2026 ಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಪೊಲೀಸರು ಸದರಿ ಸಿ.ಸಿ. ಟಿವಿ ಕ್ಯಾಮೆರಾಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ಪಿಂಗರ್ ಪ್ರಿಂಟ್ ತಜ್ಞರು ನನ್ನ ಹಾಗೂ ಸ್ಥಳದಲ್ಲಿ ದೊರೆತ ಪಿಂಗರ್ ಪ್ರಿಂಟ್

ಗಳನ್ನು ತೆಗೆದುಕೊಂಡು ಹೋಗಿದ್ದರು. ಚಾಸಾ 6 ಮತ್ತು 7 ರವರು ದೂರನ್ನು ದಾಖಲಿಸಿರುವುದಿಲ್ಲ, ನಾನು ಪೊಲೀಸರ ಕೋರಿಕೆಯ ಮೇರೆಗೆ ದೂರನ್ನು ದಾಖಲಿಸಿರುತ್ತೇನೆ ಎಂದರೆ ಸಾಕ್ಷಿಯು ಕಳ್ಳತನವಾಗಿರುವ ಸಂಬಂಧ ದೂರನ್ನು ದಾಖಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸ್ಥಳ ಮಹಜರ್ ಸಮಯದಲ್ಲಿ ಸುಮಾರು 6-7 ಜನ ಸೇರಿದ್ದರು.

ನಿಪಿ 2 ರಿಂದ 4 ರಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ರಿಂದ 4 ರಲ್ಲಿ ಕಳ್ಳತನ ಮಾಡಿದ ವಿಚಾರವಾಗಿ ನಮೂದಿಸಲಾಗಿರುತ್ತದೆ. ನಿಪಿ 2 ರಿಂದ 4 ನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ 5 ರಿಂದ 10 ರ ಭಾವಚಿತ್ರಗಳನ್ನು ಪೊಲೀಸರ ಕೋರಕೆಯ ಮೇರೆಗೆ ತೆಗೆಸಲಾಗಿರುತ್ತದೆ ಎಂದರೆ ಸರಿ. ನಾನು ಪೊಲಿಸರಿಗೆ ಮುಂದುವರೆದ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಮುಂದುವರೆದ ಹೇಳಿಕೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಹೇಳಲು ನೆನಪಿಲ್ಲ. ನಾನು ನಮ್ಮ ಅಂಗಡಿಗೆ ಸಂಬಂಧಿಸಿದಂತೆ ಪರವಾನಗಿ ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಪರವಾನಗಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ. ಸಾಕ್ಷಿಯು ಪರವಾನಗಿ ನನ್ನ ಬಳಿ ಇದೆ ಎಂದು ನುಡಿದಿರುತ್ತಾರೆ. ಈ ದಿನ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ನನ್ನ ಅಂಗಡಿಯಲ್ಲಿ ಯಾವುದೇ ಕಳ್ಳತನವಾಗದೇ ಇದ್ದರೂ ಪೊಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸಾಕ್ಷಿಯು ಮಹಜರ್ ಸಮಯದಲ್ಲಿ ನೊಡಿದ್ದೆ ಎಂದು ನುಡಿದಿರುತ್ತಾರೆ. ಅದನ್ನು ಹೊರತು ಬೇರೆ ಎಲ್ಲಿಯೂ ನೋಡಿರುವುದಿಲ್ಲ ಎಂದರೆ ಸರಿ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳ್ಳತನವಾದ ದಿನವೇ ಮು.ಮಾ. 6 ನ್ನು ಪೊಲಿಸರು ತೆಗೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ಮು.ಮಾ. 3 ರಿಂದ 6 ನ್ನು ಚಾಸಾ 6 ಮತ್ತು 7 ರವರು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಸದರಿಯವರ ಅಂಗಡಿಯಿಂದ ಜಪ್ತು ಪಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೇ.ಸರಿ ಇದೆ.

ಸಿ/ಸಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಮೊಳಕಾಲ್ಮೂರು